**Q.P. Code – 32104**

# First Semester B.Sc./B.C.A. Degree Examination, October/November 2019

*(CBCS – New – Semester Scheme)*

**ಕನ್ನಡ ಭಾಷೆ**

## Paper I – ಕಾವ್ಯಕಿರಣ – 1 ಮತ್ತು ನಾಟಕ – 2 ಯಯಾತಿ

*Time : 3 Hours]* *[Max. Marks : 90*

ಭಾಗ – 1

ಕಾವ್ಯ ಕಿರಣ –1

I. (ಅ) ಒಂದು ಪದ್ಯದ ವಿಶೇಷವನ್ನು ವಿವರಿಸಿ : **(1 × 6 = 6)**

1. ಸ್ವಾತೀಯ ಮಳೆಬಂದು ಮಳೆರಾಜಾ ಸುತ್ತ
   ದೇಶಕ ಆಗ್ಯಾದ ಮಳೆರಾಜಾ
   ಹಳ್ಳಕೊಳ್ಳ ಹೆಣ ಹರಿದಾಡಿ ಹೋದಾವು
   ಯಾವಾಗ ಬಂದೆಪ್ಪ ಮಳೆರಾಜಾ

2. ಮಾರಿಗೌತಣವಾಯ್ತು ನಾಳಿನ
   ಭಾರತವು ಚತುರಂಗ ಬಲದಲಿ
   ಕೌರವನ ರುಣ ಹಿಂಗೆ ರಣದಲಿ ಸುಭಟ ಕೋಟಿಯನು
   ತೀರಿಸಿಯೆ ಪತಿಯವಸರಕ್ಕೆ ಕ
   ರೀರವನು ನೂಕುವೆನು ನಿನ್ನಯ
   ವೀರರ್ಧವರ ನೋಯಿಸೆನು ರಾಜೀವ ಸಖನಾಣೆ.

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3 × 3 = 9)**

1. ಗಭೀರ ಚಿತ್ತರ್ ವಿವೇಕಿಗಳ್ ನಾಡವರ್ಗಳ್
2. ಹಾಲನೆರೆ ಹೋಗವ್ವ ಸದ್ಗುಣ ನಿಕಾಯಂಗೆ
3. ಬ್ರಹ್ಮಜ್ಞಾನಿಗಳು ಎನಿಸುವಿರಲ್ಲ ಹಮ್ಮು ಬಿಡಲಿಲ್ಲ
4. ಬಾಗಿಲು ತೆಗೆಯೆ ಜಾಣೆ ಬಾಗಿಲು ತೆಗೆಯೆ

(ಇ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2 × 5 = 10)

1. ತತ್ವಪದಗಳು
2. ಕನಕದಾಸರು
3. ಹರಿಹರ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಕನ್ನಡದ ಮೊದಲ ಉಪಲಬ್ಧ ಕೃತಿ ಯಾವುದು?
2. 'ಗುಹೇಶ್ವರಾ' ಎಂಬುದು ಯಾರ ಅಂಕಿತನಾಮ?
3. 'ರಗಳೆಯ ಕವಿ' ಎಂದು ಯಾರನ್ನು ಕರೆಯುತ್ತಾರೆ?
4. ರನ್ನನ ಕೃತಿಯೊಂದನ್ನು ಹೆಸರಿಸಿ.
5. ಬಣ್ಣದ ಗುಬ್ಬ್ಯಾರು ಎಂದರೆ ಯಾರು?

II. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2 × 10 = 20)

1. ಭೀಮನ ಕೋಪದ ತೀವ್ರತೆಯು ರನ್ನನ ಕಾವ್ಯಭಾಗದಲ್ಲಿ ವ್ಯಕ್ತವಾಗಿರುವ ಬಗೆಯನ್ನು ಚಿತ್ರಿಸಿ.
2. ಬಸವಣ್ಣನವರ ಭಕ್ತಿ ತತ್ವದ ವಚನಗಳನ್ನು ಕುರಿತು ಬರೆಯಿರಿ.
3. ಸರ್ವಜ್ಞನ ತ್ರಿಪದಿಗಳು ಬದಪಕಿನ ಸಂದೇಶವನ್ನು ಹೇಗೆ ಬಿತ್ತರಿಸುತ್ತವೆ? ಚರ್ಚಿಸಿ.

ಭಾಗ – 2

ನಾಟಕ : ಯಯಾತಿ

III. (ಅ) ಒಂದರ ಸ್ವಾರಸ್ಯವನ್ನು ಬರೆಯಿರಿ : (1 × 5 = 5)

1. ನಾನು ಕಣ್ಣು ತೆರೆದೆ. ನನಗೆ ದೇವತೆಯಾಗಿದ್ದ ನೀನು ಆರ್ಯಕಲದ ರಾಣಿಯಾಗಿದ್ದೆ, ನಾನು ನಿನ್ನ ದಾಸಿ, ನನ್ನ ಕಣ್ಣುಗಳಿಗೀಗ ರೆಪ್ಪೆಯಿಲ್ಲ; ದೇವರಂತೆ, ಮೀನಿನಂತೆ, ಕಣ್ತೆರೆದು ಬಿದ್ದ ಹೆಣದಂತೆ ನಾನು ಎದೆಯಿಲ್ಲದೆ ಬದುಕಿದ್ದೇನೆ, ನಿನ್ನತ್ತ ನೋಡುತ್ತ.

2. ಮನುಷ್ಯನ ಜೀವನ ಪಂಚಾಂಗದ ಮೇಲೆ ನಡೆಯುವುದಿಲ್ಲ, ನಾಡಿಯ ಸ್ಪಂದನದ ಮೇಲೆ ನಡೆಯುತ್ತದೆ. ನಿಮ್ಮ ನಂದನವನ ಬೇಡ ನನಗೆ. ಹದಿನೈದು ದಿನಗಳ ಹಿಂದೆ ನನಗೆ ಬೇಕಾದಷ್ಟು ನಂದನವನ ಸಿಕ್ಕಿತ್ತು. ಆದರೆ ಒಂದು ಸೂರ್ಯನ ಅರ್ಧಪ್ರದಕ್ಷಿಣೆ ಮುಗಿಯುವ ಮೊದಲು ನನ್ನ ಹಾಸಿಗೆಯ ಮೇಲೆ ಅರ್ಧಶತಮಾನ ನಡೆದು ಹೋಯಿತು.

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3 × 2 = 6)**

1. ತನ್ನ ವಂಶದವರೆಂದೂ ಮಾಡದಿದ್ದನ್ನು ಮಾಡಲು ಹೊರಟ ಕೀಟಕ.
2. ಮರಣದಲ್ಲಿ ಧೃತಿಯಿದೆ, ಬಿಡುಗಡೆಯಿದೆ.
3. ನಿಮ್ಮ ಹತ್ತಿರ ತಾರುಣ್ಯವಿದೆ. ಪುರುರಾಜರ ಹತ್ತಿರ ತ್ಯಾಗವಿದೆ.
4. ತ್ಯಾಗದ ಅತಿರೇಕವೂ ಒಂದು ಮೋಹ.

(ಇ) ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ : **(1 × 4 = 4)**

1. ಗಿರೀಶ್ ಕಾರ್ನಾಡ್
2. ಸ್ವರ್ಣಲತೆ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ದೇವಯಾನಿಯ ತಂದೆ ಯಾರು?
2. ಬಾವಿಯಲ್ಲಿ ಬಿದ್ದ ದೇವಯಾನಿಯನ್ನು ರಕ್ಷಿಸಿದವರಾರು?
3. ಶರ್ಮಿಷ್ಠೆ ತನ್ನನ್ನು ಏನೆಂದು ಕರೆದುಕೊಳ್ಳುತ್ತಾಳೆ?
4. ಯಯಾತಿ ಯಾವ ವಂಶಕ್ಕೆ ಸೇರಿದ ರಾಜ?
5. ಪುರುವಿನ ಪತ್ನಿಯ ಹೆಸರೇನು?

IV. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಯಯಾತಿ – ಪುರು ಈ ಇಬ್ಬರ ವ್ಯಕ್ತಿತ್ವದ ಭಿನ್ನತೆಗಳನ್ನು ಚರ್ಚಿಸಿ.
2. ಚಿತ್ರಲೇಖೆಯ ಸಾವು ಯಯಾತಿಯ ಮನಃ ಪರಿವರ್ತನೆಗೆ ಕಾರಣವಾದ ಬಗೆಯನ್ನು ವಿವರಿಸಿ.
3. ದೇವಯಾನಿ – ಶರ್ಮಿಷ್ಠೆಯರ ಗೆಳೆತನದ ಸಂಕೀರ್ಣತೆಯನ್ನು ವಿವರಿಸಿ.

———————